(ಸಾಕ್ಷಿಯನ್ನು ದಿಃ 13-12-2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು. )

**ಪಾಟಿ ಸವಾಲುಃ ಪ್ರತಿವಾದಿ ಪರವಾಗಿಃ ಶ್ರೀ ವಿ ಎ ಟಿ ವಕೀಲರಿಂದಃ**

ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ನೋಟಿಸ್ ಬಂದಿರಲಿಲ್ಲ. ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ನನಗೆ ವಾದಿ ಹೇಳಿರುತ್ತಾರೆ. ವಾದಿಯು ನನ್ನ ಹೆಂಡತಿಯ ತಮ್ಮ. ವಾದಿಯ ಅಜ್ಜನಾದ ಅಹಮ್ಮದ್ ಮೊಮಿನ್ ಗೆ 5 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳಿರುತ್ತಾರೆ. ಅವರೆಂದರೆ ಅಬ್ದುಲ್ ಗಫಾರ್ ಮೊಮಿನ್, ಯಾಕುಬ್ ಮೊಮಿನ್, ಯುಸುಫ್ ಮೊಮಿನ್, ಉಸ್ಮಾನ್ ಮೊಮಿನ್ ಮತ್ತು ಅಬ್ದುಲ್ ರಜಾಕ್ ಮೊಮಿನ್, ಖತೀಜಾ ಮೊಮಿನ್ , ಫಾತಿಮಾ ಮೊಮಿನ್ ಮತ್ತು ಹಾಲಿಮಾ ಮೊಮಿನ್ ಆಗಿರುತ್ತಾರೆ. ಅಬ್ದುಲ್ ಲತೀಫ್ ಮೊಮಿನ್ ಅಹಮ್ಮದ್ ಮೊಮಿನ್‌ರವರ ಅಳಿಯನಾಗಬೇಕು. ಖತೀಜಾ ಮೊಮಿನ್ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಎಂದರೆ ನಿಜ. ಸಾಕ್ಷಿಯು ಮುಂದುವರೆದು ಖತೀಜಾ ಮೊಮಿನ್ ರವರಿಗೆ ಇನ್ನೊಬ್ಬ ಮಗಳು ಇರುತ್ತಾರೆ ಎಂದು ನುಡಿಯುತ್ತಾರೆ. ಕುಲ್ಸುಂಬಿ ಮೊಮಿನ್‌ರವರಿಗೆ ಮದುವೆಯಾಗಿರಲಿಲ್ಲ.

ಪ್ರತಿವಾದಿಯು ಫಾತಿಮಾ ಮೊಮಿನ್ ರವರ ಮಗ ಎಂದರೆ ನಿಜ. ಅಹಮ್ಮದ್ ಮೊಮಿನ್ ರವರ 5 ಜನ ಗಂಡು ಮಕ್ಕಳ ಪೈಕಿ ಅಬ್ದುಲ್ ರಜಾಕ್ ಮೊಮಿನ್ ಮತ್ತು ಅಬ್ದುಲ್ ಲತೀಫ್ ಮೊಮಿನ್ ಇವರ ಹೆಣ್ಣು ಮಕ್ಕಳ ಪೈಕಿಯಲ್ಲಿ ಕುಲ್ಸುಂಬಿ ಮೊಮಿನ್ ಮದುವೆಯಾಗಿರಲಿಲ್ಲ ಎಂದರೆ ನಿಜ. ಆದಕಾರಣ ಪ್ರತಿವಾದಿಯನ್ನು ಕುಲ್ಸುಂಬಿ ಮೊಮಿನ್ ಮತ್ತು ಅಬ್ದುಲ್ ರಜಾಕ್ ಮೊಮಿನ್ ರವರು ದತ್ತಕ ಮಗನನ್ನಾಗಿ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯು ಕಾರವಾರದ ಕಾಜುಬಾಗದಲ್ಲಿ ವಾಸವಾಗಿರುತ್ತಾರೆ. ವಾದಿಗೆ ಮದುವೆಯಾಗಿರಲಿಲ್ಲ.

ವಾದಿ ಮತ್ತು ಪ್ರತಿವಾದಿ ಜಂಟಿ ವ್ಯಾಪಾರ ವಹಿವಾಟು ಮಾಡುತ್ತಿದ್ದ ಬಗ್ಗೆ ನಮ್ಮ ಮೌಖಿಕ ಸಾಕ್ಷವನ್ನು ಹೊರತು ಪಡಿಸಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ನಿಜ. ವಾದಿ ಮತ್ತು ಪ್ರತಿವಾದಿ ಜಂಟಿಯಾಗಿ ಅಂಗಡಿಯನ್ನು ಖರೀದಿಸಿದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂಬರ ನನಗೆ ಗೊತ್ತಿಲ್ಲ. ದಾವಾ ಮನೆಯನ್ನು ಯಾವಾಗ ಖರೀದಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಅಬ್ದುಲ್ ರಜಾಕ್

ಮೊಮಿನ್ ಕುಲ್ಸುಂಬಿ ಮೊಮಿನ್ ಮತ್ತು ವಾದಿಯ ತಾಯಿ ಮರಿಯಾಂಬಿ 1979 ರಲ್ಲಿ ಖರೀದಿಸಿದ್ದರು ಎಂದರೆ ನಿಜ. ವಾದಿ ಯಾವ ವರ್ಷ ಜನಿಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. 1979 ನೇ ಸಾಲಿನಲ್ಲಿ ವಾದಿಯನ್ನು ದಾವಾ ಆಸ್ತಿಯ ಆಸುಪಾಸಿನಲ್ಲಿ ನಾನು ನೋಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಅಬ್ದುಲ್ ರಜಾಕ್ ಮೊಮಿನ್ ಮತ್ತು ಕುಲ್ಸುಂಬಿ ಹತ್ತಿರ ವಾಸವಾಗಿದ್ದನು ಎಂದರೆ ಸರಿಯಲ್ಲ.

ಅಂಗಡಿಯನ್ನು 1994 ರಲ್ಲಿ ಖರೀದಿಸಲಾಗಿದೆ ಎಂದರೆ ನಿಜ. ಅಂಗಡಿಯ ವ್ಯವಹಾರದಿಂದ ದಾವಾ ಆಸ್ತಿಯನ್ನು ಎಂದೂ ಸಹ ಖರೀದಿಸಿಲ್ಲ ಎಂದರೆ ಸರಿಯಲ್ಲ. 1965 ರಲ್ಲಿ ವಾದಿ ಮತ್ತು ವಾದಿಯ ಚಿಕ್ಕಪ್ಪನು ಅಂಗಡಿಯಲ್ಲಿ ವ್ಯಾಪಾರ ಮಾಡುತ್ತೀದ್ದರು. ಸದರಿ ವಿಚಾರವನ್ನು ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಅದರ ಅವಶ್ಯಕತೆ ಇರಲಿಲ್ಲ. 1989 ರಲ್ಲಿ 5 ಗುಂಟೆ 13 ಆಣೆ ಜಮೀನಿನ ಪೈಕಿ 2 ಗುಂಟೆ 4 ಆಣೆ ಜಮೀನನ್ನು ಸೈಯದ್ ಜಮೀರ್ ಅಬ್ದುಲ್ ರೆಹಮಾನ್ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಅಬ್ದುಲ್ ರಜಾಕ ಮೊಮಿನ್ ಮತ್ತು ಕುಲ್ಸುಂಬಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಮನೆ ಈಗಲೂ ಸಹ ಅಬ್ದುಲ್ ರಜಾಕ್ ಮೊಮಿನ್ ರವರ ಹೆಸರಿನಲ್ಲಿಯೇ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 86/ಎ/10 ಜಮೀನು ದಾವಾ ಆಸ್ತಿ ಅಲ್ಲ ಎಂದರೆ ನನಗೆ ಗೊತ್ತಿಲ್ಲ.

ಅಬ್ದುಲ್ ರಜಾಕ್ ಮೊಮಿನ್ ಮತ್ತು ಲಕುಲ್ಸುಂಬಿರವರನ್ನು ಪ್ರತಿವಾದಿಯು ನೆಪೋಡಿಕೊಳ್ಳುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಆದಕಾರಣ ಪ್ರತಿವಾದಿಯ ಹೆಸರಿಗೆ ಅಬ್ದುಲ್ ರಜಾಕ್ ಮೊಮಿನ್ ಮತ್ತು ಕುಲ್ಸುಂಬಿರವರು ದಾನ ಪತ್ರ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಈಗಲೂ ಸಹ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾನ ಪತ್ರ ಬರೆಯುವ ಕಾಲಕ್ಕೆ ಕುಲ್ಸುಂಬಿ ಅಬ್ದುಲ್ ರಜಾಕ್ ಮೊಮಿನ್ ಮತ್ತು ಪ್ರತಿವಾದಿ ಚೆನ್ನಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ಮತ್ತು ದಾವಾ ಆಸ್ತಿಯ ಬಗ್ಗೆ ನನಗೆ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸರಿ ಇದೆ**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.